ಆದರೆ ಕೂಲಿಯವನು ಅವರ ಹಾಸಿಗೆ, ಪೆಟ್ಟಿಗೆ, ಕೊಡೆಗಳನ್ನು ಮೇಲಿನ ಸೀಟಿನ ಮೇಲಿಟ್ಟು ಹೊರಟು ಹೋಗಿದ್ದ. ರೈಲು ಚಲಿಸತೊಡಗಿತು. ಹಿರಿಯನೊಬ್ಬ ಹಾಸಿಗೆಯನ್ನು ಕೊಂಚ ಮಡಚಿ ರಾವು ಅವರಿಗೆ ಜಾಗ ಮಾಡಿದ. ಅವರು ಕುಳಿತು ಪರಿಸರವನ್ನು ವೀಕ್ಷಿಸತೊಡಗಿದರು.

ನಾಲ್ವರೂ ದೂರದ ಪ್ರಯಾಣಿಕರೆಂದು ಅವರು ಗ್ರಹಿಸಿದರು. ಬೂಟು, ಚಪ್ಪಲಿಗಳನ್ನು ಸೀಟಿನಡಿಗೆ ತಳ್ಳಲಾಗಿತ್ತು. ಕೋಟು, ಪ್ಯಾಂಟು, ಅಂಗಿಗಳನ್ನು ಮೇಲಿನ ಕೊಕ್ಕೆಗಳಿಗೆ ನೇತು ಹಾಕಲಾಗಿತ್ತು. ಸಡಿಲವಾದ ಪೈಜಾಮಗಳನ್ನು ಮೂವರು ಗಂಡಸರು ಧರಿಸಿದ್ದರು. ಎರಡು ಸೀಟುಗಳ ಮೇಲೆ ಇಬ್ಬರು ಹಿರಿಯ ವಯಸ್ಸಿನವರು ಕುಳಿತಿದ್ದರು. ಒಳಗಿನ ಉದ್ದನೆಯ ಸೀಟಿನ ಮೇಲೆ ಒಬ್ಬ ಯುವಕ, ಒಬ್ಬ ಯುವತಿ ಕುಳಿತಿದ್ದರು. ಯುವತಿ ಅವನ ಮಡದಿ ಆಗಿರಬಹುದು. ಸಿಗರೇಟು ಹೊಗೆಯ ನವಿರು ಘಾಟು ಅರಿವಾಗದಂತೆ ರಾವು ಅವರ ಮೂಗಿನ ಹೊಳ್ಳೆಗಳನ್ನು ಹೊಕ್ಕು, ಒಂದು ಕ್ಷಣಕಾಲ ಅವರನ್ನು ತಬ್ಬಿಬ್ಬುಗೊಳಿಸಿತು.



ರೈಲು ಡಬ್ಬಿಯಲ್ಲಿ ಸಿಗರೇಟು ಸೇದುವ ಬಗ್ಗೆ ರಾವು ಅವರಿಗೆ ತೀವ್ರವಾದ ಅಭಿಪ್ರಾಯಗಳಿದ್ದವು. ಅನೇಕ ವಿಷಯಗಳಲ್ಲಿಯೂ ಅವರಲ್ಲಿ ತೀವ್ರವಾದ ಅಭಿಪ್ರಾಯಗಳಿದ್ದವು. ಹೇಳಿಕೇಳಿ ಅವರು ವೇದಾಂತಿ. ಅವರಿಗೊಂದು ಅಭಿಮಾನದ ಸಿದ್ಧಾಂತವಿತ್ತು. ವೇದಾಂತ ಜೀವನದೊಂದಿಗೆ, ಜೀವನ ವಿಧಾನದೊಂದಿಗೆ, ವ್ಯಕ್ತಿಗೆ ಸಮಾಜಕ್ಕೆ ಮಧ್ಯೆ ಉಂಟಾಗುವ ವಿಧವಿಧವಾದ ಸಮಸ್ಯೆಗಳೊಂದಿಗೆ ಅನುಬಂಧವಿರುವುದೆಂದು ಅವರ ವಾದ. ಅವರ ಪ್ರಕಾರ ವೇದಾಂತಕ್ಕೆ, ಜೀವನಕ್ಕೆ, ಖಚಿತವಾದ ಮಾನವಾನುಭವಗಳಿಗೆ ಸಹ ಅತೀತವಾದ ವಿಷಯಗಳೊಂದಿಗೆ ಏನೂ ಸಂಬಂಧವಿಲ್ಲ. ಅವರ ಜೀವನ ಸುಖವಾಗಿ ಏರಿಳಿತಗಳಿಲ್ಲದೆ ಸಾಗಿತ್ತು. ಅಸಂತೃಪ್ತಿಯಿಂದಾಗಿ ಅವರು ಜೀವನವನ್ನು ಕುರಿತು ಅಮಿತ ಉತ್ಸಾಹದೊಂದಿಗೆ ಪವಿತ್ರವಾದ ಆವೇಶದೊಂದಿಗೆ ಮಾತಾಡಬಲ್ಲರು. ಒಬ್ಬ ವೇದಾಂತಿಯಾಗಿಯೇ ಅಲ್ಲದೆ ಒಳ್ಳೆಯ ಉಪನ್ಯಾಸಕರಾಗಿಯೂ ಪ್ರಖ್ಯಾತರಾಗಿದ್ದರು. ಅವರು ತಮ್ಮ ವೇದಾಂತವನ್ನು ಆವೇಶಗೊಂಡು ವಿವರಿಸುತ್ತಿರುತ್ತಾರೆ.

ಒಂದು ಉಪನ್ಯಾಸ ನೀಡಲು ಈ ಪ್ರಯಾಣ ಕೈಗೊಂಡಿದ್ದರು. 'ಆಸ್ತಿಕ ಮಹಾಸಂಘ'ವೆಂಬ ಹೆಸರಿನ ಸಂಸ್ಥೆಯೊಂದರ ಆಹ್ವಾನದ ಮೇರೆಗೆ ಅವರು ಹೊರಟಿದ್ದರು. 'ಸಮತಾವಾದವೂ ರಮ್ಯ ರಸಾಮೋದವೂ' ಎಂಬುದು ಉಪನ್ಯಾಸದ ವಿಷಯ. ಅವರ ಅಭಿಪ್ರಾಯ, ಸಮತಾವಾದದಲ್ಲಿ ಈ ರಮ್ಯರಸಾತ್ಮಕತೆ ಇದೆಯೆಂದೋ, ಇಲ್ಲ ಆ ಎರಡೂ ಪರಸ್ಪರ ವಿರುದ್ಧವಾದವು, ಆದ್ದರಿಂದ ಅವುಗಳಿಗೊಂದು ಸಮನ್ವಯ ಕಲ್ಪಿಸಬೇಕೋ ಅನ್ನುವುದನ್ನು ತಿಳಿದುಕೊಳ್ಳಬೇಕೆಂದರೆ ಅವರ ಉಪನ್ಯಾಸವನ್ನು ಕೇಳಬೇಕಾದ್ದೇ.

ರಾವು ಅವರು ಯುವ ದಂಪತಿಯತ್ತ ನೋಡಿದರು. ಯುವತಿಯ ಮುಖ ತುಂಬಾ ಪೆಚ್ಚಾಗಿತ್ತು. ಅವಳಿಗೆ ಕೊಂಚ ಉತ್ಸಾಹ ಉಂಟುಮಾಡಲಿರಬೇಕು, ಯುವಕ ನಗುತ್ತಾ ಅವಳ ಕಿವಿಯಲ್ಲಿ ಏನೋ ಹೇಳಿದ. ಬಹುಶಃ ಅವಳು ಗಂಡನೊಂದಿಗೆ ಅವನು ಉದ್ಯೋಗದಲ್ಲಿರುವ ದೂರದಾವುದೋ ದೇಶಕ್ಕೆ ಮೊದಲ ಬಾರಿ ಹೋಗುತ್ತಿರುವಂತಿತ್ತು. ರಾವು ಅವರಿಗೆ ಇತ್ತೀಚೆಗೆ ತಾವು ಮಾಡಿದ ಉಪನ್ಯಾಸ ನೆನಪಾಯಿತು. ವಿಷಯ: 'ಸತ್ವ, ತತ್ವ'. ಅವರ ಉಪನ್ಯಾಸಗಳ ಶೀರ್ಷಿಕೆಗಳು ಶಬ್ದಾಲಂಕಾರಗಳ ಅನುಸಾರ ನಿರ್ಣಯವಾಗುವುದಾದರೂ